| Roll No. | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ]
Total No. of Questions : 63 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 01-K**
**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ
# Subject : First Language — KANNADA

ದಿನಾಂಕ : 02. 04. 2012 ]
ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ]
ಪರಮಾವಧಿ ಅಂಕಗಳು : 125 ]

[ Date : 02. 04. 2012
[ Time : 10-30 A.M. to 1-45 P.M.
[ Max. Marks : 125

## FOR OFFICE USE ONLY

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | × | |
| 13. | | 26. | | 39. | | 52. | | × | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹ ಅಕ್ಷರಗಳ ಸಂಖ್ಯೆ :

(ಎ) ಹದಿಮೂರು (ಬಿ) ಆರು

(ಸಿ) ಎರಡು (ಡಿ) ಒಂಬತ್ತು

*ಉತ್ತರ :* ____________________

2. 'ಅಂಕಿತನಾಮ' ಪದಕ್ಕೆ ಉದಾಹರಣೆ :

(ಎ) ಶಾಲೆ (ಬಿ) ರಾಮನಾಥ

(ಸಿ) ಶಿಕ್ಷಕ (ಡಿ) ತಾವು

*ಉತ್ತರ :* ____________________

3. 'ಅವನು ಓದುವುದರಲ್ಲಿ ತುಂಬಾ ಜಾಣ' – ಈ ವಾಕ್ಯದಲ್ಲಿರುವ ಸರ್ವನಾಮ ಪದ :

(ಎ) ಅವನು (ಬಿ) ಓದು

(ಸಿ) ತುಂಬಾ (ಡಿ) ಜಾಣ

ಉತ್ತರ : ________________

4. 'ನೋಡು' ಧಾತುವಿನ ಸಂಭಾವನಾರ್ಥಕ ರೂಪವಿದು :

(ಎ) ನೋಡಲಿ (ಬಿ) ನೋಡಿಯಾನು

(ಸಿ) ನೋಡನು (ಡಿ) ನೋಡುವನು

ಉತ್ತರ : ________________

5. ಹಳಗನ್ನಡದ ದ್ವಿತೀಯ ವಿಭಕ್ತಿ ಪ್ರತ್ಯಯ :

(ಎ) ಮ್ (ಬಿ) ಅ

(ಸಿ) ಇಂದಂ (ಡಿ) ಅಮ್

ಉತ್ತರ : ________________

6. ಆದೇಶ ಸಂಧಿಗೆ ಉದಾಹರಣೆ :

(ಎ) ಸಿರಿಗನ್ನಡ (ಬಿ) ಮನೆಯನ್ನು

(ಸಿ) ಬೇರೊಬ್ಬ (ಡಿ) ವಾಗ್ದೇವಿ

ಉತ್ತರ : ________________

7. 'ಸಜ್ಜನ' ಪದದಲ್ಲಿ ಏರ್ಪಟ್ಟಿರುವ ಸಂಧಿ :

(ಎ) ಯಣ್ (ಬಿ) ಅನುನಾಸಿಕ

(ಸಿ) ಶ್ಚುತ್ವ (ಡಿ) ವೃದ್ಧಿ

ಉತ್ತರ : ________________

8. 'ಪೆರ್ಚ' ಪದದ ಹೊಸಗನ್ನಡ ರೂಪ :

(ಎ) ಹೆದರಿ (ಬಿ) ಕತ್ತರಿಸಿ

(ಸಿ) ಮೆಚ್ಚಿ (ಡಿ) ಹೆಚ್ಚಿ

ಉತ್ತರ : ______________________________

9. ''ಮೊಗಾ... ಗೌರಿ ಹೊಡ್ಕೊಂಡು ಹೋಗು.'' – ಈ ವಾಕ್ಯದಲ್ಲಿರುವ ಮೊಗಾ ಪದದ ಗ್ರಾಂಥಿಕ ರೂಪ :

(ಎ) ಮಗ (ಬಿ) ಮೂಗ

(ಸಿ) ಮಗಳು (ಡಿ) ಮುಖ

ಉತ್ತರ : ______________________________

10. 'ಏಕಾಕ್ಷಿ' ಪದವು ಈ ಸಮಾಸಕ್ಕೆ ಉದಾಹರಣೆ :

(ಎ) ಬಹುವ್ರೀಹಿ (ಬಿ) ದ್ವಂದ್ವ

(ಸಿ) ದ್ವಿಗು (ಡಿ) ಅಂಶಿ

ಉತ್ತರ : ______________________________

11. ಬರವಣಿಗೆಯಲ್ಲಿ ಪಾರಿಭಾಷಿಕ / ಪ್ರಧಾನ / ವಿಶೇಷ ಪದಗಳನ್ನು ಬಳಸಿದಾಗ ಉಪಯೋಗಿಸುವ ಲೇಖನ ಚಿಹ್ನೆ :

(ಎ) ಉದ್ಧರಣ (ಬಿ) ವಾಕ್ಯವೇಷ್ಟನ

(ಸಿ) ಆವರಣ (ಡಿ) ವಿವರಣ

ಉತ್ತರ : ______________________________

12. 'ರಶ್ಮಿಯು ಶಾಲೆಗೆ ತಪ್ಪದೇ ಹಾಜರಾಗುತ್ತಿದ್ದಳು. ಆದ್ದರಿಂದ ಓದಿನಲ್ಲೂ ಮುಂದಿದ್ದಳು. – ಈ ವಾಕ್ಯವು :

(ಎ) ವಿಶೇಷ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಮಿಶ್ರವಾಕ್ಯ

ಉತ್ತರ : ______________________________

13. 'ಭೃತ್ಯ' ಪದದ ಅರ್ಥ ಇದು :

(ಎ) ನಾಯಕ (ಬಿ) ದಾರಿಹೋಕ

(ಸಿ) ಸೈನಿಕ (ಡಿ) ಸೇವಕ

ಉತ್ತರ : ____________________

14. ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ :

(ಎ) ಜಾಣ್ಮೆ (ಬಿ) ರಾಮನಂತೆ

(ಸಿ) ಮಾಲೆಗಾರ (ಡಿ) ಗುಣವಂತೆ

ಉತ್ತರ : ____________________

15. 'ಖ್ಯಾತ ಕರ್ಣಾಟಕಗಳೆಂದು' ಪ್ರಸಿದ್ಧಿ ಹೊಂದಿದ್ದ ವೃತ್ತಗಳ ಸಂಖ್ಯೆ :

(ಎ) ನಾಲ್ಕು (ಬಿ) ಆರು

(ಸಿ) ಎಂಟು (ಡಿ) ಮೂರು

ಉತ್ತರ : ____________________

16. **ಕೆಳಗಿನ 'ಅ' ಪಟ್ಟಿಯ ಅಂಶಗಳಿಗೆ ಸರಿಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ :** 5 × 1 = 5

| ಅ | | ಬ | |
|---|---|---|---|
| i) | ಸಂಬಂಧಾರ್ಥಕ ಅವ್ಯಯ | ಅ) | ಧಾತ್ರಿ |
| ii) | ದ್ವಿರುಕ್ತಿ | ಆ) | ಅನಾನಸು |
| iii) | ನುಡಿಗಟ್ಟು | ಇ) | ದಾಖಲೆ |
| iv) | ತದ್ಭವ ರೂಪ | ಈ) | ಅಲ್ಲದೆ |
| v) | ಪೋರ್ಚುಗೀಸ್ ಪದ | ಉ) | ಸಿಂಹಪಾಲು |
| | | ಊ) | ಜನ್ನ |
| | | ಋ) | ಮೊಟ್ಟಮೊದಲು |
| | | ೠ) | ಚೆನ್ನಾಗಿ |

ಉತ್ತರ : i) ____________________

ii) ____________________

iii) ____________________

iv) ____________________

v) ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಅಂಗುಲೀಮಾಲನು 'ನನ್ನ ಧೈರ್ಯದ ಭೂಮಿ .................................................... ಕುಸಿಯುತ್ತಿದೆ' ಎಂದನು.

18. ಏಷ್ಯಾ ಖಂಡದಲ್ಲೇ ಅತ್ಯಾಧುನಿಕ ಸೀಬರ್ಡ್ .................................................... ಸಂಕೀರ್ಣ ಕಾರವಾರದಲ್ಲಿದೆ.

19. ಯಾವ ತೆರದಲ್ಲಿ ಯೋಚಿಸಿ ನೋಡಿದರೂ .................................................... ತಂತ್ರೋಪಾಯವು ಹೀಗೆಂದು ನಿಶ್ಚಯಿಸುವುದಕ್ಕೆ ಅಶಕ್ಯವು.

20. ಸಾಲದೆನಿಸಿದ ದಕ್ಷಿಣೆಯ .................................................... ನಿಷ್ಫಲವೆಂದು ನುಡಿದನು ರಾಯಕೌಂತೇಯ.

21. ಹೊಳೆದಂಡಿಲಿರುವ .................................................... ಕುಡಿಯಂಗ ಹಬ್ಬಲೆ ಅವರ ರಸಬಳ್ಳಿ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರ ಬರೆಯಿರಿ : 10 × 1 = 10

22. ಬುದ್ಧನು ಅಂಗುಲೀಮಾಲನಿಗೆ ಕಿತ್ತೆಸೆಯಲು ಹೇಳಿದ ಮೃತ್ಯುವಿನ ತೊತ್ತುತನದಪಮಾನ ಚಿಹ್ನೆ ಯಾವುದು ?

---

---

23. ಮೇಷ್ಟ್ರು ವೆಂಕಣ್ಣ ಯಾವುದಕ್ಕಾಗಿ ಹೆಚ್ಚು ಸಂಕಟಪಡುತ್ತಿದ್ದರು ?

---

---

24. ಮೇಷ್ಟ್ರ ಹೆಂಡತಿ ಸತ್ತಾಗ ಸಹಾಯ ಮಾಡಿದ ವೆಂಕಟಸುಬ್ಬಯ್ಯ ಎಲ್ಲಿಯವರು ?

---

---

25. ಭಾರತೀಯ ಸೇನಾ ವ್ಯವಸ್ಥೆಯ ಮಹಾದಂಡನಾಯಕರಾಗಿ ಯಾರು ಕಾರ್ಯ ನಿರ್ವಹಿಸುತ್ತಾರೆ ?

26. ಅಮಾತ್ಯರಾಕ್ಷಸನ ಪರಮಮಿತ್ರ ಯಾರು ?

27. ಶ್ರೀಭಾರತಿ ಭಾಷೆಗಳ ಕಾಂತಿಯಲ್ಲಿ ಹೇಗೆ ತೋರುತ್ತಿದ್ದಾಳೆ ?

28. ಡಿ.ವಿ.ಜಿ.ಯವರು ಯಾವ ಯಾವುದರಲ್ಲಿ ಮಿತವಿರಲಿ ಎಂದಿದ್ದಾರೆ ?

29. ಪುಲಿಗೆರೆ ಸೋಮನಾಥರು ಕಡುಪಾಪಿಯ ಸ್ನಾನವನ್ನು ಯಾವುದಕ್ಕೆ ಹೋಲಿಸಿದ್ದಾರೆ ?

30. ಮರ್ತ್ಯಾವಳಿಗೆ ಮಾತೆ ಯಾರು ?

31. ಜನಪದರ ಪ್ರಕಾರ ಲೋಕದಲ್ಲಿ ಬೆಲೆಯಾದದ್ದು ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ನಗು–ಅಳು ಎರಡೂ ಪರಸ್ಪರ ವಿರುದ್ಧವಾದುವು ಹೇಗೆ ?

33. ಅಂಗುಲೀಮಾಲನು ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ ಏನೆಂದು ಅರಿಕೆ ಮಾಡಿಕೊಂಡನು ?

34. ರಾಚಪ್ಪನು ಸಿದ್ದೇಗೌಡರಿಗೆ ಕೋಪದಲ್ಲಿ ಏನು ಮಾಡಿದನು ?

35. 'ಮೂಕ ಪ್ರಾಣಿಗಳಿಗಿಂತ ಮನುಷ್ಯ ಯಾವ ಲೆಕ್ಕದಲ್ಲಿ ದೊಡ್ಡೋನು' ಎನ್ನುವಾಗ ಸಿದ್ದಪ್ಪನು ಹೇಳಿಕೊಂಡ ಮಾತುಗಳಾವುವು ?

36. ಲೋಕದಲ್ಲಿ ತನ್ನ ಹಾಗೂ ಅಕ್ಕ–ತಂಗಿಯರ ಮಕ್ಕಳಿಗೆ ಹೇಗೆ ಭೇದ ಮಾಡುತ್ತಾರೆಂದು ವೆಂಕಣ್ಣ ಮೇಷ್ಟ್ರು ಹೇಳಿದ್ದಾರೆ ?

37. ವ್ಯಕ್ತಿಯಲ್ಲಿ ನಿಷೇಧಾತ್ಮಕ ಭಾವನೆಗಳು ಯಾವಾಗ ಸಮೀಪ ಸುಳಿಯುವುದಿಲ್ಲ ?

38. ಪಶುಲೋಮನ ಆತ್ಮಹತ್ಯಾ ಪ್ರಯತ್ನಕ್ಕೆ ಅಮಾತ್ಯರಾಕ್ಷಸನು ಊಹಿಸಿಕೊಂಡ ಕಾರಣಗಳಾವುವು ?

39. ಆಹಾರದ ನಿರೀಕ್ಷೆಯಲ್ಲಿದ್ದ ಸಿಂಹವನ್ನು ಕವಿ ಹೇಗೆ ವರ್ಣಿಸಿದ್ದಾರೆ ?

40. ಸರ್ವಜ್ಞನಾಗಲು ಏನೇನನ್ನು ಮಾಡಬೇಕೆಂದು ಪುಲಿಗೆರೆ ಸೋಮನಾಥ ಹೇಳಿದ್ದಾರೆ ?

41. ಪ್ರಜಾಮಾತೆಯ ವೈಶಿಷ್ಟ್ಯವೇನು ?

42. ಯಕ್ಷನು ಧರ್ಮಜನನ್ನು ಮೆಚ್ಚಿದ ಪ್ರಸಂಗವನ್ನು ತಿಳಿಸಿ.

43. ಹೆತ್ತತಾಯಿ ಕಂದನನ್ನು ಹೇಗೆ ವರ್ಣಿಸಿದ್ದಾಳೆ ? ತಿಳಿಸಿ.

44. ಯಾರಲ್ಲಿ ಶೌರ್ಯವನ್ನು ತೋರಿಸು ಎಂದು ಅರ್ಜುನ ಶಬರನಿಗೆ ಹೇಳಿದನು ?

45. ತನ್ನನ್ನು ಕೆಣಕುವುದು ಹೇಗಿರುತ್ತದೆಂದು ಅರ್ಜುನ ಶಬರನಿಗೆ ಹೇಳಿದನು ?

46. ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ ಸೂಚಿಸಿರುವಂತೆ ಲೋಕೋಪಕಾರಿ ಕಾರ್ಯಗಳಾವುವು ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : 5 × 3 = 15

47. 'ಶಕ್ತಿಯೇ ಜೀವನ, ದುರ್ಬಲತೆಯೇ ಮರಣ.'

48. ರಾಮಾಯಣದ ಪುಷ್ಪಕ ವಿಮಾನ ಇದಕ್ಕೊಂದು ನಿದರ್ಶನ.

49. "ಸಿಂಹಮನಿಲ್ಲಿಯೆ ಕೊಲಲುಂ ಗೆಲಲುಂ ಸಾಲ್ಗುಂ."

50. "ಬರಿಗನಸುಗಾವರಪ ಮಾಣು."

51. "ಕಲ್ಲು ಕಲ್ಲು ಕಥೆ ಬಹು ಇತಿಹಾಸದ ನುಡಿ."

ಈ ಕವಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : 2 × 3 = 6

52. ಎಂ.ಎಸ್. ಸುಂಕಾಪುರ

53. ಪಂಪ

54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ಇದು ಲಾಕ್ಷಾಗೇಹದಾಹಕ್ಕಿದು ವಿಷಯ ವಿಷಾನ್ನಕ್ಕಿದಾ ನಾಡಜೂದಿಂ

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 × 3 = 3

ಸೀತೆಯ ಮುಖಕಮಲ ಅರಳಿತು.

56. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಕಟ್ಟುವುದು ಕಠಿಣ; ಕೆಡಿಸುವುದು ಸುಲಭ

— ದೇಶ ಸುತ್ತು ಕೋಶ ಓದು

— ಶಕ್ತಿಗಿಂತ ಯುಕ್ತಿ ಮೇಲು

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಆ ರವಮಂ ______________________________________

______________________________________________

______________________________________________

______________________________________________ಬೆಮರ್ತನುರಗಪತಾಕಂ ।

ಅಥವಾ

ವಿಪಿನಚರ ______________________________________

______________________________________________

______________________________________________

______________________________________________ನುಡಿಯನೊಲ್ವರೆ ಬಲ್ಲರ್ ।

58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : $1 \times 4 = 4$

ತಾನು ಉಣ್ಣದ ಪರರಿಗಿಕ್ಕದ ಧನವಿದ್ದೇತಕೆ
ಮಾನಹೀನನಾಗಿ ಬಾಳ್ವ ಮನುಜನೇತಕೆ
ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ
ತನ್ನ ಬಳಗವೆರಸಿ ಉಣ್ಣದ ಭಾಗ್ಯವೇತಕೆ.

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ ವಿವರಿಸಿ.
— ವಿಧಾನಸೌಧ ನಿರ್ಮಾಣದ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
— ಗೌರಿ ತ್ಯಾಗಮಯಿ ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

60.

61. ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಕುರಿತು ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

— ಅಜಗಣ್ಣನ ಯೋಗದ ಬಗೆಗೆ ಮುಕ್ತಾಯಕ್ಕಳ ಅಭಿಪ್ರಾಯ ಏನು ?

— ಪಂಪನು ಬನವಾಸಿ ದೇಶವನ್ನು ಹೇಗೆ ವರ್ಣಿಸಿದ್ದಾನೆ ?

62. — ನಿಮ್ಮನ್ನು ಕಾರವಾರದ ಲಯನ್ಸ್ ಪ್ರೌಢಶಾಲೆಯ ಸಮರ್ಥ ಎಂದು ಭಾವಿಸಿಕೊಂಡು ಮೈಸೂರಿನ ಸ್ವಪ್ನ ಪುಸ್ತಕಾಲಯದ ವ್ಯವಸ್ಥಾಪಕರಿಗೆ ಶ್ರೀರಾಮಾಯಣ ದರ್ಶನಂ ಕೃತಿಯ ಲಭ್ಯತೆಯನ್ನು ತಿಳಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ. $1 \times 5 = 5$

ಅಥವಾ

— ನಿಮ್ಮನ್ನು ಬೆಂಗಳೂರಿನ ವಿಜಯನಗರ ಬಡಾವಣೆಯ ಸುಜಯ್ ಎಂದು ಭಾವಿಸಿಕೊಂಡು ದಾವಣಗೆರೆಯ ಹೊಸನಗರದಲ್ಲಿ ವಾಸವಾಗಿರುವ ತಾಯಿಯವರಿಗೆ ಶಾಲಾ ವಾರ್ಷಿಕೋತ್ಸವಕ್ಕೆ ಆಗಮಿಸುವಂತೆ ವಿನಂತಿಸಿ ಪತ್ರ ಬರೆಯಿರಿ.

63. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದಕ್ಕೆ ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯಗಳ ಪಾತ್ರ

— ಅತಿವೃಷ್ಟಿಯಿಂದ ಉಂಟಾಗುವ ಅನಾನುಕೂಲಗಳು

— ಮಾಹಿತಿ ತಂತ್ರಜ್ಞಾನದ ಅಗತ್ಯ